ಆ ಕಾಲಕ್ಕೆ ಒಂದು ಫೋಟೋ ತೆಗೆದಿದ್ದು ಅದನ್ನು ಈಗ ನೋಡುತ್ತಿದ್ದು ನಿಪಿ-7 ಎಂದು ಗುರುತಿಸಲಾಗಿದೆ. ಸದರಿ ಒಡವೆಗಳನ್ನು ಹಾಜರುಪಡಿಸಿದ ಬಗ್ಗೆ ರಸೀದಿ ಪತ್ರ ಪಡೆದಿರುತ್ತೇನೆ. ಸದರಿ ಪತ್ರ ನೋಡುತ್ತಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ-1ರವರನ್ನು ಠಾಣೆಗೆ ಕರೆಸಿದ್ದು ಒಡವೆಗಳನ್ನು ತೋರಿಸಿದ್ದು ಒಡವೆ ಗುರುತಿಸಿದ ಬಗ್ಗೆ ಚಾಸಾ-1, 8 ಮತ್ತು 9ರವರ ಮರುಹೇಳಿಕೆ ಪಡೆದಿರುತ್ತೇನೆ.

ದಿನಾಂಕ 14-08-2020 ರಂದು ಆರೋಪಿತರನ್ನು ಮೂಲ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿನಾಂಕ 02-10-2020ರಂದು ಚಾಸಾ-19ರವರಿಂದ ಫೋಟೋ ತೆಗೆಸಿದ ಬಗ್ಗೆ ಕಲಂ 65-ಬಿ ಅಡಿ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ನೋಡುತ್ತಿದ್ದು ನಿಪಿ-20 ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-20ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 03-10-2020ರಂದು ಕೇಸಿನ ಕಡತವನ್ನು ಚಾಸಾ-24ರವರಿಗೆ ವಹಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರು ಸಮಯಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**